4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 20544/2017 **ಚಾ.ಸಾ.-** 1 ಅ.ಸಾ.-1

ಪ್ರ.ವ.ಬೊ. ದಿಃ 01.08.2019

ಸಾಕ್ಷಿದಾರನ ಹೆಸರು : ಲಕ್ಷ್ಮೀ

ಗಂಡನ ಹೆಸರು : ವಿಶ್ವೇಶ್ವರ

ವಯಸ್ಸು : 55 ವರ್ಷ

ಕೆಲಸ : ಮುಜರಾಯಿ ಇಲಾಖೆ

ವಾಸ : ಮುತ್ಯಾಲನಗರ, ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ಈ ಪ್ರಕರಣದಲ್ಲಿ ದೂರು ಸಲ್ಲಿಸುವಾಗ ನಾನು ಬೆಂಗಳೂರಿನ ಬನಶಂಕರಿ ದೇವಸ್ಥಾನದ ಕಾರ್ಯನಿರ್ವಾಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿಃ 10.06.2015 ರಂದು ದೇವಸ್ಥಾನದಲ್ಲಿ ಸೋಮಶೇಖರ್ ಮತ್ತು ನಾಗರಾಜ್ ಇಬ್ಬರು ಅರ್ಚಕರು ಇದ್ದು, ದೇವಸ್ಥಾನದಲ್ಲಿ ಚಿನ್ನ ಕಳುವಾಗಿದ್ದು, ದೇವರಿಗೆ ಹಾಕಿದ್ದ ಕಿರೀಟದ ಬಲಭಾಗದಲ್ಲಿ ಸ್ವಲ್ಪ ಚಿನ್ನವನ್ನು ತೆಗೆದಿದ್ದು, ಹಾಗೂ ಬಲಭಾಗದ ಕಾಲಿನ ಬಳಿ ಹಾಕಿದ್ದ ಸ್ವಲ್ಪ ಚಿನ್ನ ಎರಡೂ ಸೇರಿ 6 ಗ್ರಾಂ 810 ಮಿಲಿ ಮುರಿದು ತೆಗೆದಿದ್ದು, ಆ ವಿಚಾರದ ಬಗ್ಗೆ 2ನೇ ಆರೋಪಿ ನಾನು ಬೆಳಿಗ್ಗೆ ಪೂಜೆ ಮಾಡಲು ಹೋದಾಗ ಈ ರೀತಿ ಚಿನ್ನವನ್ನು ತೆಗೆದಿದ್ದಾರೆ ಎಂದು ಬರವಣಿಗೆ ಮೂಲಕ ತಿಳಿಸಿದ್ದು, ನಂತರ ನಾನು ಅದರ ಬಗ್ಗೆ ವಿಚಾರಣೆ ಮಾಡಿ ಎಲ್ಲಾ ಅರ್ಚಕರಿಗೆ ನೋಟೀಸ್ ಕೊಟ್ಟು, ಸಮಜಾಯಷಿ ಪಡೆದಿದ್ದೆ. ಪ್ರಧಾನ ಅರ್ಚಕರಾದ ಸತ್ಯನಾರಾಯಣ ಶಾಸ್ತ್ರಿ ಸತೀಶ್, ಒಂದು ಮತ್ತು ಎರಡನೇ ಆರೋಪಿತರಿಗೆ ನೋಟೀಸ್ ಕೊಟ್ಟು, ಸಮಜಾಯಷಿ ಪಡೆದು, ಜಿಲ್ಲಾಧಿಕಾರಿಯಿಂದ ಅನುಮತಿ ಪಡೆದು ಈ ವಿಚಾರವಾಗಿ ನಾನು ಕುಮಾರಸ್ವಾಮಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದೇನೆ. ದೂರನ್ನು ನೋಡಿ ಸಾಕ್ಷಿ ಗುರುತಿಸಿದ್ದು ನಿ.ಪಿ.1 (4 ಪುಟಗಳು) ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ದೂರನ್ನು ಮೇಲೆ ಹೇಳಿದ ನಾಲ್ಕು ಜನ ಅರ್ಚಕರ ವಿರುದ್ಧ ಕೊಟ್ಟಿದ್ದೆ.

ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ ಅವರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ 19.09.2019 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದಃ

ಸದರಿ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಪ್ರಧಾನ ಅರ್ಚಕರಾಗಿ ಆರ್.ಸತ್ಯನಾರಾಯಣಶಾಸ್ತ್ರಿ ಹಾಗೂ ಅವರ ಸಹಾಯಕರಾಗಿ ಸತೀಶ್, ನಾಗರಾಜ್‌ರಾವ್ ಹಾಗೂ ಪರಿಚಾರಕರಾದ ಸೋಮಶೇಖರ್ ರವರು ಇದ್ದರು. ನಾನು ಇವರುಗಳು ದೇವಸ್ಥಾನದಲ್ಲಿ ದೇವರಿಗೆ ಹಾಕಿದ್ದ ವಜ್ರಾಂಗಿ ಕಿರೀಟ ಮತ್ತು ಕಾಲಿಗೆ ಧರಿಸಿದ್ದ ಪಾದುಕೆಯಲ್ಲಿನ ಚಿನ್ನದ ಕಳುವು ಮಾಡಿದ ಬಗ್ಗೆ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ದೂರನ್ನು ಸಲ್ಲಿಸಿದ್ದೇನೆ. ನಂತರ ಪೊಲೀಸರು ಕಳುವಾದ ಸ್ಥಳಕ್ಕೆ ಬಂದಿದ್ದು ನಿ.ಪಿ.2 ರಂತೆ ಪಂಚನಾಮೆ ಜರುಗಿಸಿದ್ದು, ಆ ಸಮಯದಲ್ಲಿ ನಾನು ಸ್ಥಳವನ್ನು ತೋರಿಸಿದ್ದು, ಪಂಚರ ಸಮಕ್ಷಮ ಪೊಲೀಸರು ಪಂಚನಾಮೆ ಜರುಗಿಸಿದ್ದು ನಾನು ಅದಕ್ಕೆ ಸಹಿ ಮಾಡಿದ್ದೇನೆ. ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಂತರ ದಿಃ 26.06.2016 ರಂದು ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಪಟ್ಟಂತೆ ಸದರಿ ದೇವಸ್ಥಾನದಲ್ಲಿ ಕಂಪ್ಯೂಟರ್‌ಗೆ ಅಳವಡಿಸಿದ್ದ ಸಿಪಿಯು ಅಮಾನತ್ತುಪಡಿಸಿದ್ದು, ಪಂಚನಾಮೆ ತಯಾರಿಸಿದ್ದರು. ಅಮಾನತ್ತುಪಂಚನಾಮೆಯನ್ನು ನಿ.ಪಿ.3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಈ ಮಧ್ಯೆ ಪ್ರಕರಣದ

2ನೇ ಆರೋಪಿ ಕಂಪ್ಯೂಟರ್‌ನಲ್ಲಿ ದೇವಸ್ಥಾನದ ಸಿಬ್ಬಂದಿಯವರ ಮೂಲಕ ವಿಗ್ರಹಕ್ಕೆ ಹಾಕಿದ್ದ ಕಿರೀಟ ಮತ್ತು ಪಾದುಕೆಯ ಸ್ವಲ್ಪ ಭಾಗದ ಚಿನ್ನ ಕಳುವಾಗಿದೆ ಎಂದು ಅವರಿಗೆ ತಿಳಿದು ಬಂದಿದ್ದು, ಅದರ ಬಗ್ಗೆ ಕ್ರಮ ಜರುಗಿಸುವಂತೆ ನನಗೆ ಕೊಟ್ಟ ಪತ್ರವನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿದ್ದಾರೆ ಎಂಬ ಹಿನ್ನಲೆಯಲ್ಲಿ ಸದರಿ ಸಿಪಿಯು ಅಮಾನತ್ತುಪಡಿಸಿಕೊಂಡಿದ್ದರು. ಈ ಬಗ್ಗೆ ನಾನು ನಿಪಿ.2 ರ ಉಲ್ಲೇಖದಲ್ಲಿ ತಿಳಿಸಿದ್ದು, ಆ ದಾಖಲೆ ನನ್ನ ಬಳಿ ಇದ್ದು ಹಾಜರು ಮಾಡಬಹುದು. ಸದರಿ ದೇವಸ್ಥಾನದಲ್ಲಿ ವಿಗ್ರಹಕ್ಕೆ ಧರಿಸಿದ್ದ ಕಿರೀಟದ ಕೆಳಗಡೆ ಮುರಿದು ತೆಗೆದ ಚಿನ್ನದ ಭಾಗದ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು. ಅದೇ ರೀತಿ ಪಾದುಕೆ ಭಾಗದಲ್ಲಿ ತೆಗೆದ ಚಿನ್ನದ ಭಾಗದ 2 ಫೋಟೋಗಳನ್ನು ನಿ,ಪಿ.6 ಮತ್ತು 7 ಎಂದು ಗುರುತಿಸಲಾಯಿತು. ನಂತರ ತನಿಖಾ ಕಾಲದಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಷ್ಟು ಕಳುವಾಗಿದೆ ಎನ್ನುವ ಬಗ್ಗೆ ದೃಡೀಕರಣ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿ.ಪಿ.8 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸತ್ಯನಾರಾಯಣಶಾಸ್ತ್ರಿ ಡಿ.ನಾಗರಾಜ್‌ರಾವ್ ಒಂದನೇ ಆರೋಪಿ, ಸತೀಶ್ ಹಾಗೂ ಸೋಮಶೇಖರ್ ಶರ್ಮಾ 2ನೇ ಆರೋಪಿ ರವರು ಸದರಿ ದೇವಸ್ಥಾನದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ವೇತನ ಪಡೆಯುತ್ತಿದ್ದಕ್ಕೆ ಸಂಬಂಧಪಟ್ಟಂತೆ ವೇತನ ಪ್ರಮಾಣಪತ್ರವನ್ನು ನಿ.ಪಿ.9 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ದಿಃ 01.06.2015 ರಿಂದ 20.06.2015 ರವರೆಗೆ 2ನೇ ಆರೋಪಿ ಹಾಜರಾಗಿರುವ ಬಗ್ಗೆ ಹಾಗೂ ಪರಿಚಾರಕರಾದ ಒಂದನೇ ಆರೋಪಿ ದಿಃ 01.06.2015 ರಿಂದ 18.06.2015 ರವರೆಗೆ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಹಾಜರಾತಿ ದೃಡೀಕರಣ ಪತ್ರವನ್ನು ನಿ.ಪಿ.10 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ದಿಃ 09.02.1999 ರಂದು ಜಿಲ್ಲಾಧಿಕಾರಿ ಬೆಂಗಳೂರು ನಗರ ಜಿಲ್ಲೆಯವರು ಕೇೂಟ್ಟ ಎರಡನೇ ಆರೋಪಿಯ ನೇಮಕಾತಿ ಪತ್ರವನ್ನು ನಿ.ಪಿ.11 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಅದೇ ರೀತಿ ದಿಃ 13.06.2008 ರಂದು ಸರ್ಕಾರದ ಆದೇಶದ ಅನ್ವಯ ಒಂದನೇ ಆರೋಪಿ ಪರಿಚಾರಕರ ಹುದ್ದೆಗೆ ನೇಮಕಾತಿ ಆಗಿರುವ ಆದೇಶದ ಪ್ರತಿಯನ್ನು ನಿ.ಪಿ.12 (3 ಪುಟಗಳು) ಹಾಗೂ ಸಾಕ್ಷಿಯ

ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಸಂಬಂಧಪಟ್ಟ ಭಾಗವನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು. ತನಿಖಾ ಕಾಲದಲ್ಲಿ ಕೃತ್ಯ ನಡೆದ ಸ್ಥಳದ ಸಿಸಿ ಟಿವಿ footage CD ಗಳನ್ನು ನೀಡಿದ್ದು ಎಂ.ಓ.1 ರಿಂದ 4 ಎಂದು ಗುರುತಿಸಲಾಯಿತು. ಆರೋಪಿತರು ಇಲಾಖೆ ವಹಿಸಿದ ತಮ್ಮ ಜವಾಬ್ದಾರಿಯನ್ನು ದುರುಪಯೋಗಪಡಿಸಿಕೊಂಡು ನಂಬಿಕೆದ್ರೋಹ ಮಾಡಿ ಕರ್ತವ್ಯ ನಿರ್ಲಕ್ಷತೆ ಮಾಡಿ ಮೋಸ ಮಾಡಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು